ಕರ್ನಾಟಕ ವಿಧಾನ ಸಭೆ

ಬುಧವಾರ ದಿನಾಂಕ ೨೦ನೇ ಆಗಸ್ಟ್ ೧೯೮೬

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೦೦ ಘಂಟೆಗೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಗ್ರಾಮಾಣ ಅಭಿವೃದ್ಧಿಯಲ್ಲಿ ತರಬೇತಿ ಪಡೆದ ಹಾಗೂ ಅನುಭವ ಹೊಂದಿರುವರನ್ನು ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯ್ತಿಗಳಿಗೆ ನೇಮಕ ಮಾಡುವುದು

೪೧(೬೨) ಬಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಗ್ರಾಮಾಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಅಧಿಕಾರ ವಿಕೇಂದ್ರೀಕರಣದ ಹೊಸ ಹೆಜ್ಜೆ ಎಂದು ಹೇಳಲಾದ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ್ ಪಂಚಾಯಿತಿಗಳಿಗೆ ಅಧಿಕಾರಿಗಳ ನೇಮಕವನ್ನು ಯಾವ ತತ್ವದ ಆಧಾರಗಳ ಅನ್ವಯ ಮಾಡಲಾಗುವುದು ?

ಆ) ಸುಮಾರು ೧೫–೨೦ ವರ್ಷಗಳಿಂದ ಗ್ರಾಮಾಣ ಅಭಿವೃದ್ಧಿ ಇಲಾಖೆಯಲ್ಲಿ ಗ್ರಾಮ ಸೇವಕರಾಗಿ ವಿವಿಧ ವಿಸ್ತರಣಾಧಿಕಾರಿಗಳಾಗಿ, ಸೂಪರಿಂಡೆಂಟರಾಗಿ, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಾಗಿ ಕೆಲಸ ಮಾಡಿದ ಅನುಭವ ಇರುವವರನ್ನು ಮತ್ತು ವಿಶೇಷ ತರಬೇತಿ ಹೊಂದಿದವರನ್ನು ಆದ್ಯತೆಯ ಮೇಲೆ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತುಗಳಿಗೆ ನೇಮಕ ಮಾಡಲಾಗುವುದು.

ಇ) ಈ ಬಗ್ಗೆ ಗ್ರಾಮಾಭಿವೃದ್ಧಿ ದರ್ಜೆಯನ್ನು ನಿರ್ಮಿಸಲಾಗುವುದೇ ? ಅಂಥ ದರ್ಜೆಗೆ ನೇರ ನೇಮಕ ಮಾಡುವಾಗ ಅಂಶಗಳು ಮತ್ತು ವಯಸ್ಸಿಗೆ ಪರಿಮಿತಿಯನ್ನು ಸಡಲಿಸಿ, ಗ್ರಾಮಾಣ ಅರ್ಹರಿಗೆ ಅವಕಾಶಗಳನ್ನು ಹೆಚ್ಚು ನೀಡುವ ಬಗ್ಗೆ ಪರಿಶೀಲಿಸಲಾಗುವುದೇ ?

ಶ್ರೀ ಅಬ್ದುಲ್‌ನಜೀರ್‌ಸಾಬ್, (ಗ್ರಾಮಾಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಾಕ್ಫ್ ಮಂತ್ರಿಗಳು).—

ಅ) ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಕಾಯಿದೆ ೧೯೮೩ (ಕರ್ನಾಟಕ ಕಾಯಿದೆ ೨೦, ೧೯೮೩), ಕಲಂ ೧೨೧ ಮತ್ತು ೧೭೩ರ ಪ್ರಕಾರ ನೇಮಕ ಮಾಡಲಾಗುವುದು?

ಆ) ಪರಿಶೀಲಿಸಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಗ್ರಾಮಾಭಿವೃದ್ಧಿಯ ತತ್ವದಲ್ಲಿ ನಂಬಿಕೆ ಇರುವಂತಹ ಹಾಗೂ ಅನುಭವ ಇರುವಂತಹ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವಂತಹ ಆಗತ್ಯ ಇರುವುದರಿಂದ ಹಿಂದೆ ಇಲಾಖೆಯಲ್ಲಿ ಅನೇಕ ವರ್ಷಗಳಿಂದ ಕೆಲಸ ಮಾಡಿದಂತಹ ನೌಕರರಿಗೆ ಆದ್ಯತೆ ಕೊಟ್ಟು ಈ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ನೇಮಕ ಮಾಡಿಕೊಳ್ಳುತ್ತೀರಾ ? ಅಥವಾ ರೆವಿನ್ಯೂ ಇಲಾಖೆಯಿಂದ ಇನ್ನಿತರೇ ಬೇರೆ ಇಲಾಖೆಗಳಲ್ಲಿರತಕ್ಕಂಥ ನೌಕರರಿಗೆ ಆದ್ಯತೆ ಕೊಟ್ಟು

ನೇಮಕ ಮಾಡಿಕೊಳ್ಳುವ ಬಗ್ಗೆ ಸರ್ಕಾರ ಏನಾದರೂ ನಿರ್ಣಯ ತೆಗೆದುಕೊಂಡಿದೆಯೇ ? ಮತ್ತು ರೂರಲ್ ಡೆವಲಪ್‌ಮೆಂಟಿಗೆ ಪ್ರತ್ಯೇಕ ಒಂದು ಕೇಡರ್ ರೂಲ್ಸ್ ಮಾಡುವ ಆಲೋಚನೆ ಏನಾದರೂ ಸರ್ಕಾರಕ್ಕೆ ಇದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾವು ತಾತ್ವಿಕವಾಗಿ ಒಪ್ಪಿಕೊಂಡಿದ್ದೇವೆ. ಮಾನ್ಯ ಸದಸ್ಯರ ಅಭಿಪ್ರಾಯ ಏನಿದೆಯೋ ಅದೇ ಸರ್ಕಾರದ ಯೋಚನೆ ಕೂಡ ಆಗಿದೆ. ಈ ಗ್ರಾಮಾಭಿವೃದ್ಧಿಯಲ್ಲಿ ಯಾರಿಗೆ ಹೆಚ್ಚು ಅನುಭವ ಇದೆಯೋ ಆಂತಹವರನ್ನು ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯಿತಿ ವ್ಯವಸ್ಥೆಗೆ ಅಳವಡಿಸಿ ಕೊಳ್ಳುವುದಕ್ಕಾಗಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಾವು ನೇಮಕ ಮಾಡಿದ್ದೇವೆ. ನಾನು ಮೊದಲೇ ಹೇಳಿದ ಹಾಗೆ ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾವು ತಾತ್ವಿಕವಾಗಿ ಒಪ್ಪಿಕೊಂಡಿದ್ದೇವೆ. ಇನ್ನು ಮಾನ್ಯ ಸದಸ್ಯರು ರೂರಲ್ ಡೆವಲಪ್‌ಮೆಂಟಿಗೆ ಕೇಡರ್ ರೂಲ್ಸ್ ರೂಪಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಹೇಳುವುದಾದರೆ ರಾಜ್ಯದಲ್ಲಿ ಇನ್ನು ಮುಂದೆ ಎರಡೇ ಎರಡು ಕೇಡರ್‌ಗಳು ಇರುತ್ತವೆ. ಒಂದು ರಾಜ್ಯಮಟ್ಟದಲ್ಲಿ ಮತ್ತೊಂದು ಜಿಲ್ಲಾ ಮಟ್ಟದ ಅಧಿಕಾರಿ ವರ್ಗದಲ್ಲಿ ಎರಡು ಕೇಡರ್‌ಗಳು ಇರುತ್ತವೆ. ಇನ್ನು ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತಿಗಳು ಚಾಲಿಗೆ ಬರದೇ ಇರುವುದರಿಂದ ಈಗಲೇ ಕೇಡರ್ ರೂಲ್ಸ್ ಮಾಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು.—(ಮಾನ್ಯ ಸದಸ್ಯರ ೪೨(೩೫)ರ ಪ್ರಶ್ನೆಯನ್ನು ಮುಂದೂಡಲಾಗಿದೆ.)

ಪುರಸಭೆಗಳ ತನಿಖಾ ವರದಿಗಳಲ್ಲಿರುವ ಲೋಪ ದೋಷ ಹಾಗೂ ಅವ್ಯವಹಾರಗಳ ಬಗ್ಗೆ

೪೩(೯೦) ಶ್ರೀ ಬಿ.ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ತುಮಕೂರು ಜಿಲ್ಲೆಯ ಪುರಸಭೆಗಳಲ್ಲಿ ಕಳೆದ ಮೂರು ವರ್ಷದ ತನಿಖಾ ವರದಿಯಲ್ಲಿ ಆಗಿರುವ ಲೋಪ ದೋಷಗಳು ಹಾಗೂ ಅವ್ಯವಹಾರಗಳ ಬಗ್ಗೆ ಯಾರನ್ನೂ ಜವಾಬ್ದಾರರನ್ನಾಗಿ ಮಾಡಲಾಗಿದೆ?

ಆ) ಹಾಗಿದ್ದಲ್ಲಿ ಸರ್ಕಾರದವರು ಆ ಬಗ್ಗೆ ತೆಗೆದುಕೊಂಡ ಕ್ರಮವೇನು ಹಾಗೂ ಯಾರ ಮೇಲೆ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮಂತ್ರಿಯವರು).—

ಅ) ಸಂಬಂಧ ಪಟ್ಟ ಪುರಸಭೆಯ ಈ ಲೋಪ ದೋಷಗಳನ್ನು ಸರಿಪಡಿಸಲು ಮುಖ್ಯಾಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.

ಆ) ಈ ಬಗ್ಗೆ ಸರ್ಕಾರವು ಈಗಾಗಲೇ ಒಂದು ಸಮಿತಿಯನ್ನು ರಚಿಸಿದೆ. ಅಕ್ಷೇಪಣೆ ಹಾಗೂ ವಸೂಲಾತಿಗಳ ತೀರುವಳಿ ಬಗ್ಗೆ ಸಮಿತಿಯು ಕ್ರಮ ಕೈಗೊಳ್ಳುತ್ತದೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ ಪುರಸಭೆಗಳ ಆಡಾಯದಲ್ಲಿ ಸಾಕಷ್ಟು ಅವ್ಯವಹಾರಗಳು ಆಗುವಂತಹ ಸಾಧ್ಯತೆಗಳು ಇವೆ. ಆದರೆಲ್ಲಿಯೂ ಪುರಸಭೆಯ ಮುಖ್ಯ ಅಧಿಕಾರಿಗಳು ಏನಿದ್ದಾರೆ ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಣೆ ಮಾಡದೆ ಇಂತಹ ಅವ್ಯವಹಾರಗಳಿಗೆ ಆಸ್ಪದವಾಗಿರುತ್ತದೆ. ಪುರಸಭೆಗಳಲ್ಲಿ ಆಗಿರುವಂತಹ ಲೋಪದೋಷಗಳನ್ನು ಆಡಿಟ್ ಇಲಾಖೆಯವರು ಪತ್ತೆ ಮಾಡಿ ವರದಿಯನ್ನು ಸರ್ಕಾರಕ್ಕೆ ಕೊಟ್ಟಮೇಲೆ ಸರ್ಕಾರದವರು ಸಂಬಂಧ ಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದಿತ್ತು. ಈ ಆಡಿಟ್ ಇಲಾಖೆ ಏತಕ್ಕೆ ಇರಬೇಕು ? ಇಂತಹ ಸಂದರ್ಭಗಳು ಸಾಕಷ್ಟು ಇವೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಚಿಕ್ಕನಾಯಕನಹಳ್ಳಿ ಪುರಸಭೆಯಲ್ಲಿ ಸುಮಾರು ೨೯ ಸಾವಿರ ರೂಪಾಯಿಗಳು ದುರುಪಯೋಗವಾಗಿರುವ ಬಗ್ಗೆ ಆಡಿಟ್ ಇಲಾಖೆಯವರು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಆವರ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಇದರ ಜೊತೆಗೆ ಮತ್ತೆ ನೇರವಾಗಿ ಚೆಕ್‌ಗಳನ್ನು ಸಹ ಆವರ ಹೆಸರಿಗೆ ಕೊಡುತ್ತಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರು ತಕ್ಷಣ ಕ್ರಮ ತೆಗೆದುಕೊಳ್ಳಬೇಕು,